"ಜಾತಿ ಗೀತಿ ಕೇಳಿದ್ರಾ?"

"ಕೇಳೋಕೇನುಂಟು, ತನ್ನಷ್ಟಕ್ಕೆ ಗೊತ್ತಾಗುತ್ತೆ"

ಅಮ್ಮನಿಗೆ, ದೊಡ್ಡಮ್ಮನಿಗೆ ಮೊದಲಿಗೆ ವಿಚಾರಿಸಬೇಕಾದ ಸಂಗತಿಯೇ ಜಾತಿ. ನಮ್ಮವರಾಗಿದ್ದರೆ ಎಲ್ಲರ ಜೊತೆ ಪಂಕ್ತಿಯಲ್ಲಿ ಊಟ. ಹಾಗಿಲ್ಲದಿದ್ದರೆ ಅವರನ್ನು ಸಹಪಂಕ್ತಿಗೆ ಸೇರಿಸದೆ ಪ್ರತ್ಯೇಕತೆ ಕಾಪಾಡಿಕೊಂಡು, ಇಂತಾ ಮಡಿವಂತಿಕೆ ಸಹಜವಾಗಿ ಸ್ವೀಕೃತವಾಗಿದ್ದಂತಾ ಕಾಲ.

ಅಮ್ಮ ಹೇಳಿದ ಮಾತು ಸತ್ಯವಾಗಿತ್ತು. ಬಂದವನು ಮನೆಯಲ್ಲಿ ಠಿಕಾಣಿ ಹೂಡಿದ. ಮನೆಯ ಅಂಗಳಕ್ಕೆ ಹೊಂದಿಕೊಂಡಂತಿದ್ದ ಪಣತದ ಕೊಟ್ಟಿಗೆಯಲ್ಲಿ ಒಂದು ಕೋಣೆ, ಸ್ಟೋರ್ ಕೋಣೆ ಎನ್ನುವ ನಾಮಧೇಯ ಹೊಂದಿದ್ದರೂ ಊರಿಗೆ ವರ್ಗವಾಗಿ ಬರುತ್ತಿದ್ದ ಹೊಸ ಮೇಷ್ಟರಿಗೆ ಅವಶ್ಯಕತೆ ಬಿದ್ದಾಗ ಆಶ್ರಯಸ್ಥಾನವಾಗಿ ಪರಿವರ್ತಿತವಾಗಿ ಬಂದವರು ಅಲ್ಲಿ ತಳ ಊರುತ್ತಿದ್ದರು. ಮೋಹನ ಕೂಡಾ ಅಲ್ಲಿ ತನ್ನ ಟ್ರಂಕು ಬಿಚ್ಚಿ ಬಟ್ಟೆಬರೆ ಜೋಡಿಸಿಕೊಂಡು ಮನೆ ಯಜಮಾನರಿಗೆ ಕೃತಜ್ಞನಾದ.

"ನನ್ನ ಮಾತು ಅಂದ್ರೆ ನಿಮಗೆ ಯಾವತ್ತೂ ಸಸಾರ. ಇದು ಹಿಂಗೇ ಆಗುತ್ತೆ ಅಂತ ಗೊತ್ತಿತ್ತು ನಂಗೆ..." ಅಮ್ಮನ ಆಕ್ಷೇಪಣೆಯ ಧಾಟಿಯಲ್ಲಿ ಈ ಸಲ ಇನ್ನೊಂದು ಪುಕಾರು ಸೇರಿಕೊಂಡಿತ್ತು,

"ಇನ್ನೂ ಹುಡುಗ ಕಣ್ರೀ. ಮೂವತ್ತೂ ಆದ್ಹಂಗೆ ಕಾಣಲ್ಲ. ಮನೇಲಿ ಮದುವೆಗೆ ನೆರೆದ ಹುಡುಗಿ ಇದಾಳೆ. ಇಂತೋರನ್ನ ಮನೇ ಹತ್ರ ಬಿಟ್ಕೊಳ್ಳೋದು ಒಳ್ಳೇದೇನಲ್ಲ"

"ಏನು? ಸುಭದ್ರೇನ ಅರ್ಜುನ ಹಾರಿಸಿಕೊಂಡು ಹೋದ ಹಾಗೆ ಹಾರಿಸ್ಕೊಂಡು ಹೋಗ್ತಾನೆ ಅಂತಾ? ಏನಂದ್ಕಂಡಿದ್ದಿ ನನ್ನ ಮಗಳನ್ನ?"

"ಆದ್ರೂ ನಾವಾಗಿ ನಾವು ಯಾಕೆ ತಾಪತ್ರಯಾನ ಮೈಮೇಲೆ ಎಳ್ಕಂಬೇಕು? ಬೇರೆ ಕಡೆ ಜಾಗ ನೋಡ್ಕಾ ಅನ್ನಿ..."

"ಈ ಊರಲ್ಲಿ ಬೇರೆ ಕಡೆ ಅಂದ್ರೆ ಯಾರ ಮನೇಲಿ ಜಾಗ ಕೊಡ್ತಾರೆ? ಪೇಟೇಲಿ ಮನೆ ಮಾಡ್ಕಂಡು ಓಡಾಡ್ಬೇಕು, ಅಷ್ಟೇ. ಹುಡುಗ ಒಳ್ಳೆಯೋನ ಹಂಗೆ ಕಾಣ್ತಾನೆ. ಅವನ ಸ್ವಭಾವ ಹಿಡಿಸ್ಲಿಲ್ಲ ಅಂದ್ರೆ 'ಹೋಗು, ನಡಿ' ಅನ್ನೋಕೆ ಎಷ್ಟು ಹೊತ್ತು?"

"ಕರ್ಣ ಸತ್ತು ನೀವು ಹುಟ್ಟಿದ್ದು" ಅಮ್ಮ ವ್ಯಂಗ್ಯವಾಡಿದ್ದಳು. ತೀರಾ ಸುಳ್ಳೇನಲ್ಲ. 'ಅಯ್ಯೋ...' ಅನ್ನುವ ಸ್ವಭಾವ ಅವನಿಗೆ ಕೊಂಚ ಜಾಸ್ತಿಯೇ ಇತ್ತು, ನಾಗೇಶಣ್ಣನ ಹಾಗೆ. ಅಥವಾ ಅಪ್ಪನ ಹಾಗೆ ನಾಗೇಶಣ್ಣನ ಸ್ವಭಾವವಾ? 'ಅವನ ಮೂತಿ ನೋಡಿದ್ರೆ ಅವನನ್ನ ಲೌ ಮಾಡ್ತೀನಾ ನಾನು? ಈ ಅಮ್ಮನಿಗೆ ಖಂಡಿತಾ ಭ್ರಾಂತು' ಅಂದುಕೊಂಡು ತನ್ನಷ್ಟಕ್ಕೆ ನಕ್ಕಿದ್ದಳು ಕಾವೇರಿ, ಮನಸ್ಸಿನೊಳಗೇ. ಮೂತಿ ನೋಡಿ ಹುಟ್ಟುವುದಿಲ್ಲ ಪ್ರೀತಿ, ಅದೊಂದು ಅರ್ಥವೇ ಆಗದ ಅನುಭೂತಿ ಎನ್ನುವುದನ್ನು ಆ ಕ್ಷಣದಲ್ಲಿ ಅವಳು ಕಲ್ಪಿಸಿಕೊಂಡಿರಲಿಲ್ಲ. ಅಷ್ಟೊಂದು ಬುದ್ಧಿ ಬೆಳೆದವಳೂ ಆಗಿರಲಿಲ್ಲ.

ನಾಚಿಕೆಮುಳ್ಳಿಗೆ ಮತ್ತೊಂದು ಹೆಸರು ಮೋಹನ ಅನ್ನಬಹುದೇನೋ. ತನ್ನ ಅನ್ನ ತಾನೇ ಬೇಯಿಸಿಕೊಳ್ಳುತ್ತಾ, ಆಗೀಗ ಅಮ್ಮ ನಾಗೇಶಣ್ಣನ ಹತ್ತಿರ ಸಾರನ್ನೋ, ಹುಳಿಯನ್ನೋ ಕೊಟ್ಟು ಕಳಿಸುತ್ತಿದ್ದಳು, 'ತಾನೇ ಕೈ ಸುಟ್ಟುಕೊಳ್ಳುತ್ತಾನೆ, ಪಾಪದ ಹುಡುಗ' ಎನ್ನುವ ಕನಿಕರದಿಂದ. ಹಬ್ಬಹರಿದಿನಗಳಲ್ಲಿ ತಮ್ಮ ಮನೆಯಲ್ಲೇ ಊಟಕ್ಕೆ ಆಹ್ವಾನ. ಬಂದವನು ತಲೆ ಮೇಲೆತ್ತದೆ ಉಂಡು ಎದ್ದು ಹೋಗುವುದನ್ನು ಗಮನಿಸಿ ಕ್ರಮೇಣ ಅಮ್ಮನ ಗುಮಾನಿ ಕೂಡಾ ಕಮ್ಮಿಯಾಗಿ,